ಎಂ.ವಿ.ಸಿ. ನಂ.144/2020 ರಲ್ಲಿ
ಆರ್.ಡಬ್ಲ್ಯೂ-2(ಹೆಚ್.ಬಿ. ಗುರು ಪ್ರಸಾದ್)

ದಿನಾಂಕ 02.08.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ಶ್ರೀ.ಎಸ್.ವೈ.ಎಸ್.. ವಕೀಲರಿಂದಃ-

ನಾನು 2ನೇ ಎದುರುದಾರರ ಕಂಪನಿಯ ಪರ ಲೀಗಲ್ ಸೇಲ್‌ನ ಅಸಿಸ್ಟೆಂಟ್. ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತು ಮಾಡಬೇಕೆಂದು ಕೋರುತ್ತೇನೆ.

| | |
|---|---|
| ನಿಆರ್-1 | ಅಧಿಕಾರ ಪತ್ರ |
| ನಿಆರ್-2 | ಎಂ.ಎಲ್.ಸಿ. ರಿಜಿಸ್ಟ್ರರ್ ಎಕ್ಸ್ಟ್ರಾಕ್ಟ್ |
| ನಿಆರ್-3 | ಚಾರ್ಜ್ ಶೀಟ್‌ನ ನಕಲು |
| ನಿಆರ್-4 | ಪಾಲಿಸಿಯ ದೃಢೀಕೃತ ನಕಲು |

ಆದ್ದರಿಂದ ಅರ್ಜಿಯನ್ನು ವಜಾಗೊಳಿಸುವಂತೆ ಕೋರುತ್ತೇನೆ.

ಪಾಟೀ ಸವಾಲು ಪರ ಶ್ರೀ.ಹೆಚ್.ಎಸ್., ವಕೀಲರಿಂದ ಶ್ರೀ.ಟಿ.ಕೆ.ಎಸ್. ವಕೀಲರ ಪರವಾಗಿಃ-

ನಾನು ಈ ದಿನ ಪೊಲೀಸ್ ದಾಖಲೆ ಮತ್ತು ಮೆಡಿಕಲ್ ದಾಖಲೆಯ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ನಿ.ಆರ್-2 ರಲ್ಲಿ ವೈದ್ಯರು ಗಾಯಾಳುವಿನಿಂದ ರಕ್ತ ಮಾದರಿ ತೆಗೆದಿರುವುದರ ಬಗ್ಗೆ ಮಾಹಿತಿ ಇಲ್ಲ. ನಿ.ಆರ್.2 ರಲ್ಲಿ ಯಾವುದರ ಆಧಾರದ ಮೇಲೆ ಗಾಯಳು was

under influance of halcohal ಎಂದು ನಮೂದು ಮಾಡಿಲ್ಲ. ನಿಆರ್-2 ರಲ್ಲಿ ಆರೋಪಿ ಎಷ್ಟು ಪ್ರಮಾಣದ ಹಾಲ್ಕೊಹಾಲ್ ಸೇವಿಸಿದ್ದರು ಎಂದು ನಮೂದು ಮಾಡಿಲ್ಲ. ಐ.ಎಂ.ವಿ . ಕಾಯ್ದೆ ಕಲಂ 185 ರ ಪ್ರಕಾರ 100 ಎಂ.ಎಲ್. ಗೆ 30 ಎಂ.ಜಿ ಗಿಂತ ಕಡಿಮೆ ಇದ್ದಲ್ಲಿ ಅಂತ ವ್ಯಕ್ತಿ ಗಾಡಿ ಓಡಿಸಬಹುದು ಎಂದರೆ ಸಾಕ್ಷಿ ಸರಿ, ಆದರೆ ದೋಷಾರೋಪಣಾ ಪತ್ರದಲ್ಲಿ ಕಲಂ 185 ಸೇರಿಸಿರುವುದರಿಂದ ವ್ಯಕ್ತಿ ಹೆಚ್ಚು ಹಾಲ್ಕೋಹಾಲ್ ಸೇವಿಸಿದ್ದರಿಂದಲೇ ಆ ಕಲಂ ಹಾಕಿದ್ದಾರೆಂದು ನುಡಿಯುತ್ತಾರೆ. ಆರೋಪಿ 100 ಎಂ.ಎಲ್ ಗೆ 30 ಎಂ.ಜಿ ಗಿಂತ ಜಾಸ್ತಿ ಹಾಲ್ಕೋಹಾಲ್ ಸೇವಿಸಿದ್ದರು ಎಂದು ಎಫ್.ಎಸ್.ಎಲ್. ವರದಿಯಲ್ಲಿ ಇಲ್ಲ ಹಾಗೂ ನಿ.ಆರ್-3 ರಲ್ಲಿಯೂ ನಮೂದು ಮಾಡಿಲ್ಲ, ಅದೇ ರೀತಿ ಬ್ಲೋಯಿಂಗ್ ವರದಿ ಸಹ ಇಲ್ಲ. ಆ ದಿನ ಆರೋಪಿ ಮದ್ಯಪಾನ ಮಾಡಿರಲಿಲ್ಲ, ಪೊಲೀಸರೊಂದಿಗೆ ಶಾಮೀಲಾಗಿ ಕಲಂ 185 ಐ.ಎಂ.ವಿ. ಕಾಯ್ದೆ ಯನ್ನು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಮೃತರು ಹೆಲ್ಮೆಟ್ ಧರಿಸಿಕೊಂಡು ಗಾಡಿ ಓಡಿಸುತ್ತಿದ್ದರು ಸಹ, ಅವರು ಹೆಲ್ಮೆಟ್ ಧರಿಸಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳನ್ನು ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ಯಾರ 4 ಮತ್ತು 5 ರಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.